NOVEMBER 02, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕನ್ನಡವನ್ನು ಹೊಸ ತಂತ್ರಜ್ಞಾನದ, ಬಳಕೆಯ ಭಾಷೆಯನ್ನಾಗಿಸಲು, ವಿದ್ವಾಂಸರು ಹಾಗೂ ತಂತ್ರಜ್ಞರಿಗೆ, ಮುಖ್ಯಮಂತ್ರಿ ಕರೆ.**
- **'ಜಾಗರೂಕತೆ, ನಮ್ಮ ಸಾಮೂಹಿಕ ಜವಾಬ್ದಾರಿ'; ವಿಚಕ್ಷಣಾ ಸಪ್ತಾಹ, ಇಂದಿಗೆ ಸಂಪನ್ನ.**
- **ನೈಋತ್ಯ ರೇಲ್ವೆ, ಅಕ್ಟೋಬರ್ ತಿಂಗಳಾಂತ್ಯಕ್ಕೆ,ಸರಕು ಸಾಗಣೆಯಲ್ಲಿ, 421 ಕೋಟಿ 25 ಲಕ್ಷ ರೂಪಾಯಿ, ಆದಾಯ ಗಳಿಕೆ.**
- **ಅತ್ಯಂತ ಭಾರದ, ಸಂವಹನ ಉಪಗ್ರಹ, ಸಿ.ಎಂ.ಎಸ್ – 03 ಇಸ್ರೋದಿಂದ ಇಂದು, ಉಡಾವಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಕನ್ನಡವನ್ನು ಹೊಸ ತಂತ್ರಜ್ಞಾನದ, ಅನ್ವಯಿಕ ಹಾಗೂ ಬಳಕೆಯ ಭಾಷೆಯನ್ನಾಗಿಸಲು, ವಿದ್ವಾಂಸರು ಹಾಗೂ ತಂತ್ರಜ್ಞರು ಮುಂದಾಗುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ, 70ನೇ ಕರ್ನಾಟಕ ರಾಜ್ಯೋತ್ಸವದ, ಪ್ರಧಾನ ಕಾರ್ಯಕ್ರಮದಲ್ಲಿ, ಧ್ವಜಾರೋಹಣ ನೆರವೇರಿಸಿ, ಅವರು ಮಾತನಾಡಿದರು. ರಾಜ್ಯದಲ್ಲಿ 3 ಸಾವಿರದಷ್ಟು, ಶತಮಾನ ಕಂಡ, ಕನ್ನಡ ಶಾಲೆಗಳಿವೆ. 800 ಕನ್ನಡ ಶಾಲೆಗಳು ಮತ್ತು 100 ಉರ್ದು ಶಾಲೆಗಳನ್ನು, ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನಾಗಿ, ಮೇಲ್ದರ್ಜೆಗೇರಿಸಲಾಗುವುದು. ಮದರಸಾಗಳಲ್ಲಿ ಕಡ್ಡಾಯವಾಗಿ ಕನ್ನಡ ಕಲಿಸಲು, ಆದ್ಯತೆ ನೀಡಲಾಗುವುದು, ಎಂದರು.**

<><><>

**ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ, 'ಪ್ರಜ್ವಲಿಸುತ್ತಿದೆ 70ರ ದೀಪ; ಮಾಡೋಣ ಕನ್ನಡ ಕಟ್ಟುವ ಸಂಕಲ್ಪ' ಧ್ಯೇಯದೊಂದಿಗೆ, ಸಂಜೆ ಆಯೋಜಿಸಿದ್ದ, ವರ್ಣ ರಂಜಿತ ಕಾರ್ಯಕ್ರಮದಲ್ಲಿ, ವಿವಿಧ ಕ್ಷೇತ್ರಗಳ 70 ಜನ ಸಾಧಕರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ರಾಜ್ಯೋತ್ಸವ ಪ್ರಶಸ್ತಿ ಪ್ರದಾನಿಸಿ, ಗೌರವಿಸಿದರು.**

<><><>

ವೃತ್ತಿಯಿಂದ, ನಿವೃತ್ತ ಇಂಗ್ಲಿಷ್ ಭಾಷಾ ಪ್ರಾಧ್ಯಾಪಕಿ:ಪ್ರವೃತ್ತಿಯಿಂದ, ಕನ್ನಡ, ಇಂಗ್ಲಿಷ್, ಹಿಂದಿ, ಮಲೆಯಾಳಂ ಮತ್ತು ತುಳು ಭಾಷೆಗಳ ನಡುವೆ, 50ಕ್ಕೂ ಹೆಚ್ಚು ಕೃತಿಗಳನ್ನು ಅನುವಾದಿಸಿದವರು, ಉಡುಪಿ ಜಿಲ್ಲೆ, ಕುಂದಾಪುರದ, ಪ್ರೊಫೆಸರ್ ಪಾರ್ವತಿ ಐತಾಳ. ಆಕಾಶವಾಣಿ ರಾಷ್ಟ್ರೀಯ ನಾಟಕಗಳ ಅನುವಾದಕಿಯೂ ಆಗಿರುವ, ಪಾರ್ವತಿ ಐತಾಳ ಅವರು, 4 ಭಾಷೆಗಳ ಮಹತ್ವದ ಕೃತಿಗಳನ್ನು ಅನುವಾದಿಸಿ, ಭಾಷಾ ಸಾಮರಸ್ಯದ ಅಪರೂಪದ ಕೊಂಡಿ, ಎನಿಸಿದ್ದಾರೆ. ಕನ್ನಡ ಭಾಷಾಭಿಮಾನ ಹಾಗೂ ಅನುವಾದದ ಆಸ್ಥೆ ಕುರಿತು, ಅವರು ತಮ್ಮ ಅನಿಸಿಕೆ ವ್ಯಕ್ತ ಪಡಿಸಿದ್ದು ಹೀಗೆ..

<><><>

ಡಾ. ಪಾರ್ವತಿ ಐತಾಳ ಧ್ವನಿ 45 ಸೆಕೆಂದುಗಳು

<><><>

ವಿಚಕ್ಷಣಾ ಜಾಗೃತಿ ಸಪ್ತಾಹ, ಇಂದು ಸಮಾರೋಪಗೊಳ್ಳಲಿದೆ. 'ಜಾಗರೂಕತೆ, ನಮ್ಮ ಸಾಮೂಹಿಕ ಹೊಣೆಗಾರಿಕೆ' ಎಂಬ ಧ್ಯೇಯದೊಂದಿಗೆ, ವಿಚಕ್ಷಣಾ ಜಾಗೃತಿ ಸಪ್ತಾಹವನ್ನು, ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಜನ ಸಹಭಾಗಿತ್ವದೊಂದಿಗೆ ಆಚರಿಸಲಾಯಿತು.

<><><>

ಕೊಟ್ಪಾ ಕಾಯ್ದೆ ಅಡಿ, ತಂಬಾಕು, ಮದ್ಯ, ಮಾದಕ ವಸ್ತುಗಳ ಸೇವನೆ ಮತ್ತು ಸಾಗಣೆ ವಿರುದ್ಧ, ಧಾರವಾಡ ಜಿಲ್ಲೆಯಾದ್ಯಂತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೈಗೊಂಡ, ವಿಚಕ್ಷಣಾ ಕಾರ್ಯದ ಕುರಿತು, ಮಾಹಿತಿ ನೀಡಿದ್ದಾರೆ, ಜಿಲ್ಲಾ ಆರೋಗ್ಯಾಧಿಕಾರಿ, ಎಸ್.ಎಂ. ಹೊನಕೇರಿ.

<><><>

ಡಾ. ಎಸ್.ಎಂ. ಹೊನಕೇರಿ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ನೈಋತ್ಯ ರೇಲ್ವೆ, ಅಕ್ಟೋಬರ್ ತಿಂಗಳಾಂತ್ಯಕ್ಕೆ,ಸರಕು ಸಾಗಣೆಯಲ್ಲಿ, 421 ಕೋಟಿ 25 ಲಕ್ಷ ರೂಪಾಯಿ, ಆದಾಯ ಗಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, 38 ಕೋಟಿ 46 ಲಕ್ಷ ರೂಪಾಯಿ ಹೆಚ್ಚುವರಿ ಆದಾಯ ಬಂದಿದೆ. ಪ್ರಯಾಣಿಕರಿಂದ, 310 ಕೋಟಿ 51 ಲಕ್ಷ ರೂಪಾಯಿ ಆದಾಯ ಸಂಗ್ರಹವಾಗಿದ್ದು, ಅಕ್ಟೋಬರ್ ತಿಂಗಳಾಂತ್ಯಕ್ಕೆ, ಕಳೆದ ವರ್ಷಕ್ಕಿಂತ, ಶೇಕಡ 15 ದಶಾಂಶ 8-2 ರಷ್ಟು ಹೆಚ್ಚುವರಿ ಗಳಿಕೆ ಸಾಧಿಸಲಾಗಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ –ಇಸ್ರೋ, ಇಂದು, ದೇಶದ ಅತ್ಯಂತ ಭಾರವಾದ, ಸಂವಹನ ಉಪಗ್ರಹ, ಸಿ.ಎಂ.ಎಸ್ – 03 ಉಡಾವಣೆಗೆ, ಸಕಲ ಸಿದ್ಧತೆ ಕೈಗೊಂಡಿದೆ. 4 ಸಾವಿರದ 400 ಕಿಲೋ ತೂಕದ, ಸಿ.ಎಂ.ಎಸ್ – 03, ಬಹು ಬ್ಯಾಂಡ್ ಮಿಲಿಟರಿ ಸಂವಹನ ಉಪಗ್ರಹವನ್ನು, ಜಿ.ಎಸ್.ಎ.ಟಿ. 7 ಆರ್ ಎಂದು ಕರೆಯಲಾಗುತ್ತದೆ. ಭಾರತದ ಅತ್ಯಂತ ಶಕ್ತಿಶಾಲಿ ಉಡಾವಣಾ ರಾಕೆಟ್, 'ಮಾರ್ಕ್ ತ್ರೀ' ಮೂಲಕ, ಆಂಧ್ರ ಪ್ರದೇಶದ ಶ್ರೀಹರಿ ಕೋಟಾದ, ಸತೀಶ ಧವನ್ ಬಾಹ್ಯಾಕಾಶ ಕೇಂದ್ರದಿಂದ, ಇಂದು ಸಂಜೆ, 5 ಗಂಟೆ 26 ನಿಮಿಷಕ್ಕೆ, ಉಪಗ್ರಹ ಉಡಾವಣೆಯಾಗಲಿದೆ. ಸಂಜೆ 4 ಗಂಟೆ 56 ನಿಮಿಷದಿಂದ, ಉಡಾವಣೆಯ ಅಂತಿಮ ಸಿದ್ಧತೆಗಳು ಆರಂಭವಾಗಲಿವೆ ಎಂದು, ಇಸ್ರೋ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದೆ.

<><><>

ಹಾವೇರಿ ಜಿಲ್ಲೆ, ಅಗಡಿಯ, ಕೀರ್ತಿಶೇಷ ಕಲಾವಿದ ಎನ್.ಸಿ. ದೇಸಾಯಿ ರಚಿಸಿದ, ಅಪರೂಪದ ಚಿತ್ರ ಕಲಾಕೃತಿಗಳ ಪ್ರದರ್ಶಿನಿ ಹಾಗೂ ಮಾರಾಟ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯದಲ್ಲಿ ನಾಡಿದ್ದು 4ನೇ ತಾರೀಖಿನ ವರೆಗೆ, ಆಯೋಜಿತವಾಗಿದೆ. ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ, ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಪ್ರದರ್ಶಿನಿ ಉದ್ಘಾಟಿಸಿದರು.

ಶ್ರೀ ಮೂರುಸಾವಿರ ಮಠ, ವಿದ್ಯಾವರ್ಧಕ ಸಂಘದ ಅಧ್ಯಕ್ಷ, ಅರವಿಂದ ಕುಬಸದ ಹಾಗೂ ಹಿರಿಯ ಛಾಯಾಚಿತ್ರ ಕಲಾವಿದ ಶಶಿ ಸಾಲಿ, ಕ್ಯೂಆರ್. ಕೋಡ್ ಅಳವಡಿಸಿದ, ಎನ್.ಸಿ. ದೇಸಾಯಿ ಅವರ, ಡಿಜಿಟಲ್ ಕಲಾಕೃತಿಗಳನ್ನು, ಅನಾವರಣಗೊಳಿಸಿದರು. ಹಿರಿಯ ಪತ್ರಕರ್ತ ಹೃಷಿಕೇಶ ಬಹಾದ್ದೂರ ದೇಸಾಯಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಹೃಷಿಕೇಶ ಬಹಾದ್ದೂರ ದೇಸಾಯಿ ಧ್ವನಿ 45 ಸೆಕೆಂದುಗಳು

<><><>

ಒಡಿಶಾದ ತನ್ವಿ ಪತ್ರಿ ಎದುರು, ಅಮೋಘ ಆಟವಾಡಿದ, ಲಖನೌದ ಮಾನಸಿ ಸಿಂಗ್, ಚೊಚ್ಚಲ ಅಂತಾರಾಷ್ಟ್ರೀಯ ಪ್ರಶಸ್ತಿ ಕನಸನ್ನು, ಚಿಗುರಿಸಿದ್ದಾರೆ. ಮಂಗಳೂರಿನ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತ, ಚೀಫ್ ಮಿನಿಸ್ಟರ್ಸ್, ಮಂಗಳೂರು ಇಂಡಿಯಾ, ಇಂಟರ್ ನ್ಯಾಶನಲ್ ಬ್ಯಾಡ್ಮಿಂಟನ್ ಚಾಲೆಂಜ್ ಟೂರ್ನಿಯ, ಮಹಿಳೆಯರ ಸಿಂಗಲ್ಸ್ ಫೈನಲ್ ನಲ್ಲಿ, ಅವರು ಅಸ್ಸಾಂ ನ ಅಸ್ಮಿತಾ ಚಾಲಿಹ ಎದುರು, ಇಂದು ಸೆಣಸಲಿದ್ದಾರೆ.

<><><>

ಪುರುಷರ ವಿಭಾಗದಲ್ಲಿ, ತಮಿಳುನಾಡಿನ ಋತ್ವಿಕ್ ಸತೀಶ್ ಕುಮಾರ ಹಾಗೂ ಛತ್ತಿಸಘಡದ 18 ವರ್ಷದ, ರೌನಕ್ ಚೌವ್ಹಾಣ್ ಪ್ರಶಸ್ತಿಗಾಗಿ ಮುಖಾಮುಖಿಯಾಗಲಿದ್ದಾರೆ.

<><><>

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ, ಉಚಿತ ಟೋಲ್–ಫ್ರೀ ನೂತನ ಸಹಾಯವಾಣಿ ಸಂಖ್ಯೆ, 1–5–1–5, ನಿನ್ನೆಯಿಂದ ಕಾರ್ಯಾರಂಭಿಸಿದೆ. ಫೋ ’ಣ್ ಮತ್ತು ಪಿ.ಎಂ., ಎಂ.ವಿ.ವೈ.ಗೆ ಸಂಬಂಧಿಸಿದ, ಪ್ರಶ್ನೆಗಳು ಹಾಗೂ ಮಾಹಿತಿ ಪಡೆಯಲು, ಈ ಸಹಾಯವಾಣಿ ಸಹಕಾರಿಯಾಗಿದೆ.

<><><>

ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ನಿನ್ನೆ ನವೆಂಬರ್ 1 ರಿಂದ, ಈ ತಿಂಗಳ 30ನೇ ತಾರೀಖಿನ ವರೆಗೆ, ಡಿಜಿಟಲ್ ಲೈಫ್ ಸರ್ಟಿಫಿಕೆಟ್, ಜೀವಿತ ಪ್ರಮಾಣ ಪತ್ರ ಸಲ್ಲಿಕೆ ಆಂದೋಲನ, ಆಯೋಜಿಸಿದೆ.

<><><>

ಕರ್ನಾಟಕ ರಾಜ್ಯೋತ್ಸವದ ಹಿನ್ನೆಲೆ, ಈ ತಿಂಗಳ 30ರ ವರೆಗೆ, ಕನ್ನಡ ಪುಸ್ತಕ ಪ್ರಾಧಿಕಾರದ, ಎಲ್ಲ ಪುಸ್ತಕಗಳ ಮೇಲೆ, ಶೇಕಡ 50 ರಷ್ಟು ರಿಯಾಯಿತಿ ಪ್ರಕಟಿಸಲಾಗಿದೆ ಎಂದು, ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣಸಿಂಗ್ ತಿಳಿಸಿದ್ದಾರೆ.

<><><>

ರಾಜ್ಯೋತ್ಸವದ ಪ್ರಯುಕ್ತ, ಕುವೆಂಪು ಭಾ ಾ ಭಾರತಿ ಪ್ರಾಧಿಕಾರ, ತನ್ನ ಎಲ್ಲ ಪ್ರಕಟಣೆಗಳ ಮೇಲೆ, ಪ್ರಸಕ್ತ ನವೆಂಬರ್ ತಿಂಗಳಾಂತ್ಯದ ವರೆಗೆ, ಶೇಕಡ 50ರ ರಿಯಾಯಿತಿ ದರದಲ್ಲಿ, ಪುಸ್ತಕಗಳನ್ನು ಮಾರಾಟ ಮಾಡಲಿದೆ ಎಂದು, ಪ್ರಾಧಿಕಾರದ ರಿಜಿಸ್ಟ್ರಾರ್ ದತ್ತಪ್ಪ ಸಾಗನೂರ ತಿಳಿಸಿದ್ದಾರೆ. ಪುಸ್ತಕಗಳನ್ನು ಆನ್‌ಲೈನ್ ಮೂಲಕವೂ ಖರೀದಿಸಬಹುದು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕನ್ನಡವನ್ನು ಹೊಸ ತಂತ್ರಜ್ಞಾನದ, ಬಳಕೆಯ ಭಾಷೆಯನ್ನಾಗಿಸಲು, ವಿದ್ವಾಂಸರು ಹಾಗೂ ತಂತ್ರಜ್ಞರಿಗೆ, ಮುಖ್ಯಮಂತ್ರಿ ಕರೆ.
- ‘ಜಾಗರೂಕತೆ, ನಮ್ಮ ಸಾಮೂಹಿಕ ಜವಾಬ್ದಾರಿ’; ವಿಚಕ್ಷಣಾ ಸಪ್ತಾಹ, ಇಂದಿಗೆ ಸಂಪನ್ನ.
- ನೈಋತ್ಯ ರೇಲ್ವೆ, ಅಕ್ಟೋಬರ್ ತಿಂಗಳಾಂತ್ಯಕ್ಕೆ,ಸರಕು ಸಾಗಣೆಯಲ್ಲಿ, 421 ಕೋಟಿ 25 ಲಕ್ಷ ರೂಪಾಯಿ, ಆದಾಯ ಗಳಿಕೆ.
- ಅತ್ಯಂತ ಭಾರದ, ಸಂವಹನ ಉಪಗ್ರಹ, ಸಿ.ಎಂ.ಎಸ್ – 03 ಇಸ್ರೋದಿಂದ ಇಂದು, ಉಡಾವಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>